3200 ಮೆಟ್ರಿಕ್‌ಟನ್ ಕಳೆದ ವರ್ಷ ಬಂದಿತ್ತು. ಆದೇಶ ಹೊರಡಿಸಿರತಕ್ಕದ್ದು 13-5-1993ರಲ್ಲಿ. ನಾವು ಕೇಂದ್ರ ಸರ್ಕಾರಕ್ಕೆ ಬೇಡಿಕೆಯನ್ನು ಇಟ್ಟಾಗ ಅವರು ಒಂದು ಆದೇಶವನ್ನು ಹೊರಡಿಸಿ ಏನೇನು ಕ್ರಮ ತೆಗೆದುಕೊಂಡಿದ್ದೇವೆ ಎಂಬುದನ್ನು ಹೇಳಿದ್ದಾರೆ. ಈಗಾಗಲೇ ನಾಲ್ಕೈದು ಕ್ರಮವನ್ನು, ಅಡ್ವಾನ್ಸ್ ಲೈಸನಿಂಗ್‌ಸ್ಕೀಂನಲ್ಲಿ ಅದನ್ನು ನಿಲ್ಲಿಸತಕ್ಕದ್ದಾಗಲೀ ಇದರ ಜೊತೆಗೆ ಫ್ರೀಷಿಪ್‌ಮೆಂಟ್ ಇನ್‌ಸ್ಪೆಕ್ಷನ್ ಮೊದಲು ಏನು ಮಾಡುತ್ತಿದ್ದರು ಅದನ್ನು ರೀಇಂಟ್ರೊಡ್ಯೂಸ್ ಮಾಡಿ ಕ್ವಾಂಟಿಟಿ ಬೇಸ್ಡ್ ಇನ್‌ಪುಟ್ ಔಟ್‌ಪುಟ್ ಬೇಸ್ಡ್ ಅದನ್ನು ವ್ಯಾಲ್ಯೂ ಬೇಸ್ಡ್ ಎಂದು ಮಾಡಿ ಈ ನಾಲ್ಕೈದು ನಿರ್ಧಾರವನ್ನು ಬಹಳ ಶೀಘ್ರವಾಗಿ ತೆಗೆದುಕೊಂಡ ಕಾರಣಕ್ಕೆ ಇವತ್ತಿನದಿವಸ ಕಡಿಮೆಯಾಗಿದೆ. ಆದರೆ ಅದು ಎಷ್ಟು ಕಡಿಮೆಯಾಗಿದೆ ಎಂದು ರಾಷ್ಟ್ರ ಮಟ್ಟದ ವಿಚಾರವಾಗಿರುವುದರಿಂದ ನನಗೆ ಅಂಕಿಅಂಶ ಸಿಗುವುದಿಲ್ಲ. ತದನಂತರ ಅದನ್ನು ಒದಗಿಸಿಕೊಡುವುದಕ್ಕೆ ಆಗುತ್ತದೆ.

11.40 ಎ.ಎಂ

ಡಾ॥ ಡಿ. ಪರಮೇಶ್ : ಇದರ ಜೊತೆಗೆ ಈ ಕ್ರಮ ತೆಗೆದುಕೊಂಡು ಕೇಂದ್ರಸರ್ಕಾರದವರು ಆದೇಶ ಹೊರಡಿಸಿದ ಮೇಲೆ ನಮ್ಮ ಮಾರುಕಟ್ಟೆಯಲ್ಲಿ ಕಚ್ಚಾರೇಷ್ಮೆ ಚೈನಾದಿಂದ ಬರತಕ್ಕದ್ದು ಅಷ್ಟು ಯಥೇಚ್ಛವಾಗಿ ಸಿಗುತ್ತಿಲ್ಲವೆನ್ನುವುದನ್ನು ನಾವು ಕಂಡುಹಿಡಿದಿದ್ದೇವೆ. ಅದರ ಜೊತೆಗೆ ನಾವು ಕೂಡ ಕರ್ನಾಟಕ ರಾಜ್ಯದ ವತಿಯಿಂದ ಒಂದು ಅಮೆಂಡ್‌ಮೆಂಟ್‌ನ್ನು ಈ ಮನೆಯಲ್ಲಿ ಕಳೆದಸಾರಿ ಪಾಸ್ ಮಾಡಿದ್ದು ನಿನ್ನೆ ಅದನ್ನು ಮೇಲ್ಮನೆಯಲ್ಲಿ ಪಾಸ್ ಮಾಡಿ ಇವತ್ತಿನಿಂದ ಅದು ಅಸ್ತಿತ್ವಕ್ಕೆ ಬಂದಿದೆ. ಈ ಅಮೆಂಡ್‌ಮೆಂಟ್‌ನಲ್ಲಿ ಕಚ್ಚಾರೇಷ್ಮೆಯನ್ನು ಕಳ್ಳಸಾಗಣಿಕೆಯಿಂದ ಏನು ಚೈನಾದಿಂದ ತರುತ್ತಾರೆ ಅವರಿಗೆ ಫೈನ್ ಹಾಕತಕ್ಕ ಅಮೆಂಡ್‌ಮೆಂಟ್ ಅದು ಅಸ್ತಿತ್ವಕ್ಕೆ ಬಂದಿದೆ. ಈ ದೃಷ್ಟಿಯಿಂದ ಮಾರುಕಟ್ಟೆಯಲ್ಲಿ ನಾವು ಈಗಾಗಲೇ ಹತೋಟಿಗೆ ತಂದಿದ್ದೇವೆ. ಹಿಂದೆ ಒಂದು ಕೆ.ಜಿ. ಗೂಡಿಗೆ 50-60 ರೂಪಾಯಿ ಬೆಲೆಯಿತ್ತು. ಅದು ಇವತ್ತು 100-150 ರೂಪಾಯಿಗಳಿಗೆ ಹೋಗುತ್ತಿದೆ. ಅದು ಈವೊಂದು ಕಾರಣಕ್ಕಾಗಿ ಎಂಬುದನ್ನು ಮಾನ್ಯಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ವಿಷಯ : ವಿಶ್ವಯೋಜನೆಯಲ್ಲಿ ನಿಗದಿಪಡಿಸಿದ ಆಯವ್ಯಯ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 127(82)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1992-93, 93-94ರ ವಿಶ್ವ ಯೋಜನೆಯಲ್ಲಿ ಆಯವ್ಯಯದಲ್ಲಿ ನಿಗಧಿಪಡಿಸಿದ ಖರ್ಚು, ಮಾಡಿದ ಹಾಗೂ ಖರ್ಚು ಮಾಡದೇ ಉಳಿಸಿದ ಮೊತ್ತವೆಷ್ಟು?

ಆ) ಈ ಯೋಜನೆಯಲ್ಲಿ ತಯಾರಿಕ ಹಾಗೂ ಉತ್ಪಾದಕರಿಂದ ಖರೀದಿಸಿದ ವಸ್ತುಗಳ ವಿವರ ಹಾಗೂ ಅವುಗಳನ್ನು ಖರೀದಿಸಿದ ಮೊತ್ತವೆಷ್ಟು?

ಇ) ಈ ಯೋಜನೆಯಲ್ಲಿ 92-93 : 93-94ರಲ್ಲಿ ಸರ್ಕಾರ ವಸ್ತುಗಳನ್ನು ಖರೀದಿ ಮಾಡಿದ ಮೊತ್ತ ಮಾರಾಟ ಮಾಡಿದ ಮೊತ್ತ ಹಾಗೂ ವರ್ಷದ ಅಂತ್ಯಕ್ಕೆ ಶಿಲ್ಕು ಮಾಲಿನ ಮೊತ್ತವೆಷ್ಟು?

ಶ್ರೀ ಎ.ಎಂ. ಹಿಂಡಸಗೇರಿ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು)

ಅ) (ರೂ. ಲಕ್ಷಗಳಲ್ಲಿ)

ಸಂ	ವರ್ಷ	ಬಡ್ಜೆಟ್‌ಮೊತ್ತ	ಮಾಡಿದ ಖರ್ಚು	ಉಳಿದ ಮೊತ್ತ
1.	1992-93	7500.00	2121.965	5078.035
2.	1993-94	6675.68	1373.868	5301.812
	ಒಟ್ಟು :	14175,68	3795.833	10379.847

ಆ) (ರೂ.ಲಕ್ಷಗಳಲ್ಲಿ)

ಸಂ.	ವರ್ಷ	ಖರೀದಿಸಿದ ವಸ್ತುಗಳ ಮೊತ್ತ	ಖರೀದಿಸಿದ ವಸ್ತುಗಳ ವಿವರ
1.	1992-93	1277.43	ಸ್ಯಾಂಡಲ್ ವುಡ್ ಗಾರಲ್ಯಾಂಡ್ಸ್, ಕಾಕೂನ್ ಗಾರಲ್ಯಾಂಡ್ಸ್, ಪ್ರಿಂಟಿಂಗ್ಸ್, ಕಾರ್ಪೆಟ್ಸ್, ಮೈರ್ ಡಾಲ್ಸ್, ಎಂಬ್ರಾಡರಿ ಕ್ಲಾತ್, ಮ್ಯಾಟ್ಸ್, ಫೂಟ್ ರಗ್ಸ್ ಲೆದರ್ ಯುಟಿಲಿಟಿ ಆರ್ಟಿಕಲ್ಸ್, ಫುಟ್‌ವೇರ್ ಪಾಟರಿ, ಮ್ಯಾಚ್ ಬಾಕ್ಸ್, ಅಗರ ಬತ್ತಿ, ಪಾಪಡ್, ಪಿಕಲ್ಸ್, ಮಸಾಲ ಪೌಡರ್, ಕೇನ್ ಅಂಡ್ ಬಾಂಬೂ, ಕಾಡನ್ ಅಂಡ್ ಸಿಲ್ಕ್ ಫ್ಯಾಬ್ರಿಕ್ಸ್, ನೋಟ್ ಬುಕ್ಸ್ ರೆಡಿಮೇಡ್ ಗಾರ್ಮೆಂಟ್ಸ್, ಆರ್ಟಿಫಿಶಿಯಲ್ ಗಮ್ಸ್, ಇತ್ಯಾದಿ.
2.	1993-94	1655.39	
	ಒಟ್ಟು :	2932 .82	

(ರೂ. ಲಕ್ಷಗಳಲ್ಲಿ)

ಸಂ.	ವರ್ಷ	ಖರೀದಿ	ಮಾರಾಟ	ಶಿಲ್ಕು ಮಾಲಿನ ಮೊತ್ತ
1.	1992-93	1277.43	1320.04	500.18
2.	1993-94	1655.39	2994.10	573.54
	ಒಟ್ಟು :	2932.82	4314.18	1073.72

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಬಹಳ ಪ್ರಮುಖವಾದ ಪ್ರಶ್ನೆ ವಿಶ್ವ ಯೋಜನೆಯಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಗ್ರಾಮೀಣ ಯುವಕರಿಗೆ ಉದ್ಯೋಗ ಒದಗಿಸುವುದಕ್ಕೆ ಪ್ರಯತ್ನ

ಮಾಡಿದ್ದೇವೆ. 5 ವರ್ಷಗಳಲ್ಲಿ 700 ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ. ಗ್ರಾಮೀಣಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡಿಸಿ ಕೊಟ್ಟು ಮಾರ್ಕೆಟ್ ಇಲ್ಲದಿದ್ದರೆ ವಿದೇಶಿ ಮಾರ್ಕೆಟ್ ಒದಗಿಸಿ ಕೊಡುವಂತಹ ಸ್ಕೀಮ್. ಇವತ್ತು ಅವರು ಹೇಳುತ್ತಾರೆ, 1992-93 ಸಾಲಿನಲ್ಲಿ ತೆಗೆದಿಟ್ಟ ಹಣ ಬಜೆಟ್‌ನಲ್ಲಿ 7500ಲಕ್ಷ ಅಂದರೆ 75 ಕೋಟಿ ರೂಪಾಯಿ ಅಷ್ಟೊಂದು ಉತ್ಸಾಹದಲ್ಲಿ ಪ್ರಾರಂಭ ಮಾಡಿ ಖರ್ಚು ಎಷ್ಟು ಮಾಡಿದ್ದಾರೆ? 2421 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆಂದು ಹೇಳುತ್ತಾರೆ. 1993-94ನೇ ಸಾಲಿನಲ್ಲಿ ಖರ್ಚು ಮಾಡಿರುವುದು 6675.68 ಲಕ್ಷ ರೂಪಾಯಿ ನಾನು ಹೇಳುವುದು ನೀವು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿಕೊಂಡ ಹಣದಲ್ಲಿ ಕಾಲುಭಾಗ ಸಹ ಖರ್ಚು ಮಾಡಿಲ್ಲ. ನಿಮಗೆ ವಿಶ್ವ ಯೋಜನೆಯಲ್ಲಿ ಕಳಕಳಿಯಿಲ್ಲ. ಕೇವಲ ಪಕ್ಷದ ಪ್ರಚಾರಕ್ಕಾಗಿ ಇದನ್ನು ಮಾಡಿದ್ದೀರಿ ಎನ್ನುವ ಪರಿಸ್ಥಿತಿ ಬರುತ್ತದೆ. ಅದಕೋಸ್ಕರ ಕೊನೆಯ ಪಕ್ಷ 1994-95 ಸಾಲಿನಲ್ಲಿ ಎಷ್ಟು ಹಣವನ್ನು ತೆಗೆದು ಇಟ್ಟಿದ್ದೀರಿ? ಇದುವರೆಗೆ ಎಷ್ಟು ಖರ್ಚು ಮಾಡಿದ್ದೀರಿ? ಹಿಂದೆ 1992-93ನೇ ಸಾಲಿನಲ್ಲಿ ಮತ್ತು 1993-94ನೇ ಸಾಲಿನಲ್ಲಿ ಖರ್ಚು ಮಾಡದಿರುವುದಕ್ಕೆ ಸಕಾರಣವೇನು ಸ್ವಾಮಿ?

ಶ್ರೀ ಎ.ಎಂ. ಹಿಂಡಸಗೇರಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ ಇದು ಪಕ್ಷದ ಪ್ರಚಾರಕ್ಕೋಸ್ಕರ ಮಾಡಿದ ಕಾರ್ಯಕ್ರಮವಲ್ಲ. ಬಡವರಿಗೆ ಗ್ರಾಮೀಣಭಾಗದ ಜನರಿಗೆ ಉದ್ಯೋಗವನ್ನು ಒದಗಿಸಿ ಕೊಡುವ ಒಂದು ಸದುದ್ದೇಶದಿಂದ ಪ್ರಾರಂಭ ಮಾಡಿದ ಕಾರ್ಯಕ್ರಮವಿದು. ಮಾನ್ಯಸದಸ್ಯರು ಹೇಳಿದಂತಹ ಮೊದಲನೆಯ ವರ್ಷ 1992-93ನೇ ಸಾಲಿನಲ್ಲಿ ಇದು ಒಂದು ಹೊಸ ಯೋಜನೆ ಇತ್ತು. ಸರ್ವ ಪ್ರಯತ್ನ ಮಾಡಿ 1,54,149 ಜನ ಫಲಾನುಭವಿಗಳನ್ನು ನಿಗದಿಪಡಿಸಿ ಅದರಲ್ಲಿ 76,802 ಜನರಿಗೆ ಟ್ರೈನಿಂಗ್ ಕೊಡಲಾಯಿತು. ಇದು ಮೊದಲನೆಯ ವರ್ಷದಲ್ಲಿ. ತದನಂತರ 1993-94ನೇ ಸಾಲಿನಲ್ಲಿ 61,157 ಜನ ಫಲಾನುಭವಿಗಳನ್ನು ನಿಗದಿಪಡಿಸಿ ಅರಕ್ಕಿಂತ ಹೆಚ್ಚು ಫಲಾನುಭವಿಗಳಿಗೆ 61,452 ಜನರಿಗೆ ಟ್ರೈನಿಂಗ್ ಕೊಡಲಾಯಿತು. ಈ ಯೋಜನೆಯ ಅಡಿಯಲ್ಲಿ 1ಸಾವಿರ ಶೆಡ್‌ಗಳನ್ನು ಕಟ್ಟಲಾಯಿತು. ಇಡೀ ರಾಜ್ಯದಲ್ಲಿ ಶೆಡ್‌ಗಳನ್ನು ಕಟ್ಟಲಿಕ್ಕೆ ಪ್ರಾರಂಭ ಮಾಡಿ 810ಶೆಡ್‌ಗಳನ್ನು ಕಟ್ಟಿಸಿ ಕೊಡಲಾಗಿದೆ. ಇದರ ಮಧ್ಯದಲ್ಲಿ ಸುಸ್ತಾಗಿ ಇನ್ನಿತರ ಸಂಸ್ಥೆಗಳಿಂದ ಅಂದರೆ ಕರ್ನಾಟಕ ಫೈನಾನ್ಸ್ ಕಾರ್ಪೊರೇಷನ್, ಕಮರ್ಷಿಯಲ್ ಬ್ಯಾಂಕ್ಸ್, ಲ್ಯಾಂಡ್‌ಬ್ಯಾಂಕ್ ಮತ್ತು ಕರ್ನಾಟಕ ಇಂಡಸ್ಟ್ರಿಯಲ್ ಇನ್‌ವೆಸ್ಟಮೆಂಟ್ ಡೆವೆಲಪ್‌ಮೆಂಟ್ ಕಾರ್ಪೊರೇಷನ್‌ನಿಂದ ಹಣವನ್ನು ಒದಗಿಸಿ ಕೊಟ್ಟಿದ್ದೇವೆ. ಸುಮಾರು 1739.18ಲಕ್ಷ ರೂಪಾಯಿಗಳನ್ನು ಈಗಾಗಲೇ ಕೊಡಲಾಗಿದೆ. ಅದಕ್ಕೋಸ್ಕರ ಸರ್ವ ಪ್ರಯತ್ನ ಮಾಡಿ ಫಲಾನುಭವಿಗಳಿಗೆ ಉದ್ಯೋಗಾವಕಾಶ ಮಾಡಿ ಕೊಡಲಾಗಿದೆ. ಅದಷ್ಟುಮಟ್ಟಿಗೆ ಉದ್ಯೋಗಾವಕಾಶ ಮಾಡಿಕೊಡುವ ನಮ್ಮ ಪ್ರಯತ್ನ ಜಾರಿಯಲ್ಲಿದೆ. ಮಾನ್ಯಸದಸ್ಯರು ಹೇಳಿದಹಾಗೆ 1 994-95 ಸಾಲಿನಲ್ಲಿ 48.5 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಇಡಲಾಗಿದೆ. ಮೂರ್ನಾಲ್ಕು ತಿಂಗಳುಗಳಲ್ಲಿ 6ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ.

ಶ್ರೀ ಬಿ. ಎಸ್ ಯಡಿಯೂರಪ್ಪ : ಇಲ್ಲಿ ಪ್ರಮುಖವಾಗಿರತಕ್ಕದ್ದು, 74 ಸಾವಿರ ಜನರಿಗೆ ಟ್ರೈನಿಂಗ್ ಕೊಟ್ಟಿದ್ದೇವೆಂದು ಹೇಳಿದ್ದಾರೆ. ನಮ್ಮ ಯುವಕರಿಗೆ ಟ್ರೈನಿಂಗ್ ಬೇಡ. ಅವರಿಗೆ ಟ್ರೈನಿಂಗ್ ಆಗಿದೆ. ಅವರು ಉದ್ಯೋಗ ಮಾಡಿ ಅವರ

ಕಾಲಮೇಲೆ ನಿಲ್ಲುವುದಕ್ಕೆ ಅನುಕೂಲವಾಗುವ ಹಾಗೆ ಎಷ್ಟು ಜನರಿಗೆ ಅನುಕೂಲ ಮಾಡಿದ್ದೀರಿ ಎಂಬುದನ್ನು ತಾವು ಹೇಳಬೇಕು. ತಾವು ಹೇಳುತ್ತೀರಿ ಈ ವರ್ಷದಲ್ಲಿ 48 ಕೋಟಿ ರೂಪಾಯಿ ಇಟ್ಟೀದ್ದೀರಿ ಅದರಲ್ಲಿ 6 ಕೋಟಿ ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ನಾವು ಈಗಾಗಲೇ ಸೆಪ್ಟೆಂಬರ್ ತಿಂಗಳಿಗೆ ಬಂದಿದ್ದೇವೆ 6 ಕೋಟಿ ಖರ್ಚು ಮಾಡಿದ್ದೀರಿ ಉಳಿದ 6ತಿಂಗಳಿನಲ್ಲಿ ಏನು ಮಾಡುತ್ತೀರಿ? ನೀವು ಮಾಡುವುದಕ್ಕೆ ಸಾಧ್ಯತೆ ಇದೆಯೆ? ಹಿಂದೆ ನೀವು ಏನು ಮಾಡಲಿಲ್ಲ? ಇನ್ನು ಟ್ರೈನಿಂಗ್ ಕೊಟ್ಟಿದ್ದೇ ನಮ್ಮ ಕಾರ್ಯಕ್ರಮವೆಂದರೆ ನನ್ನದೇನೂ ಅಭ್ಯಂತರವಿಲ್ಲ. ಟ್ರೈನಿಂಗ್ ಆಗಿರುವವರಿಗೆ ಎಷ್ಟು ಜನರಿಗೆ ವಿಶ್ವ ಯೋಜನೆಯಲ್ಲಿ ಉದ್ಯೋಗ ಕೊಟ್ಟಿದ್ದೀರಿ. ತಪ್ಪು ಇದ್ದರೆ ಅದನ್ನು ನೋಡಿಕೊಳ್ಳಿ. ನಾನು ಏನು ಪ್ರಶ್ನೆ ಕೇಳ್ಳಿದ್ದೇನೆ, ಈ ಯೋಜನೆಯಲ್ಲಿ ಎಷ್ಟು ಖರೀದಿ ಮಾಡಿದ್ದೀರಿ? ಎಷ್ಟು ಮಾರಾಟ ಮಾಡಿದ್ದೀರಿ ಎಷ್ಟು ಉಳಿದಿದೆ? ವಿಚಿತ್ರವಾದ ಅಂಕಿಅಂಶಗಳನ್ನು ಕೊಟ್ಟಿದ್ದೀರಿ. ದಯಮಾಡಿ ವೆರಿಫೈ ಮಾಡಿ ಹೇಳಿ. 1992-93ನೇ ಸಾಲಿನಲ್ಲಿ 1227.43ಲಕ್ಷ ರೂಪಾಯಿಗಳಿಗೆ ಖರೀದಿ ಮಾಡಿದ್ದೀರಿ ಮಾರಾಟ ಮಾಡಿರುವುದು ಅದಕ್ಕಿಂತ ಜಾಸ್ತಿ ತುಂಬಾ ಸಂತೋಷ. 1320.08ಲಕ್ಷ ರೂಪಾಯಿಗಳಿಗೆ ಮಾರಾಟ ಮಾಡಿದ್ದೀರಿ, ಸ್ಟಾಕ್ ಎಷ್ಟಿದೆ? 500.18ಲಕ್ಷ ರೂಪಾಯಿ ವಸ್ತುಗಳು ಸ್ಟಾಕ್ ಇದೆಯೆಂದು ಹೇಳುತ್ತೀರಿ ಅದು ಎಲ್ಲಿದೆ? ಉಪ್ಪಿನಕಾಯಿ, ಹಪ್ಪಳ, ಮಸಾಲಪೌಡರ್ ಈ ತರಹ ನೀವು ಏನು ಹೇಳುತ್ತೀರಿ ಅದು 500ಲಕ್ಷ ಸ್ಟಾಕ್ ಎಲ್ಲಿದೆ? 1993-94ನೇ ಸಾಲಿನಲ್ಲಿ 573ಲಕ್ಷ ಸ್ಟಾಕ್ ಇದೆಯೆಂದು ಹೇಳುತ್ತೀರಿ ನೀವು ಕೊಟ್ಟಿರುವ ಅಂಕಿಅಂಶಗಳು ಸರಿಯಿಲ್ಲ. ಅದನ್ನು ಪರಿಶೀಲನೆ ಮಾಡಿ ಸರಿಯಾಗಿ ಹೇಳಿ. ನಮ್ಮಗಳು ಪ್ರಕಾರ 1327ಲಕ್ಷ ಖರೀದಿ ಮಾಡಿದರೆ ಅದಕ್ಕೆ 500ಲಕ್ಷ ಸೇರಿಸಿದರೆ 1820ಲಕ್ಷ ಅಂದರೆ 600ಲಕ್ಷ ಲಾಭ ಮಾಡಿದ್ದೀರೇನು? 1993-94ರಲ್ಲಿ 1655ಲಕ್ಷ ಖರೀದಿ ಮಾಡಿ 2994ಲಕ್ಷ ಮಾರಾಟವಾಗಿದೆಯೆಂದು ಹೇಳುತ್ತೀರಿ? 573ಲಕ್ಷ ರೂಪಾಯಿ ಸಾಮಗ್ರಿ ಸ್ಟಾಕ್ ಇದೆಯೆಂದು ಹೇಳುತ್ತೀರಿ ಆ ಫಿಗರ್ಸ್ ಸರಿಯಿದೆಯೇ ಎಂದು ನೋಡಿ ಹೇಳಿ.

ಶ್ರೀ ಎಂ.ಎ. ಹಿಂಡಸಗೇರಿ : ಮಾನ್ಯಅಧ್ಯಕ್ಷರೇ, ನಾವು ಸರಿಯಾದ ಫಿಗರ್ಸ್, ಕೊಟ್ಟಿದ್ದೇವೆ. ಬಜೆಟ್ ಪ್ರಾವಿಷನ್‌ನಲ್ಲಿ ಖರ್ಚುಮಾಡಿ ಉಳಿದಿದ್ದು ಹಣ. ಅವರು ಹೇಳಿದಂತೆ 100ಪರ್ಸಂಟ್ ಹಣವನ್ನು ಖರ್ಚುಮಾಡುವುದಕ್ಕೆ ಆಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಪ್ರಶ್ನೆ ಏನೆಂದರೆ ಈ ಯೋಜನೆ ಅಡಿಯಲ್ಲಿ 1992-93 ಮತ್ತು 1993-94ನೇ ಸಾಲಿನಲ್ಲಿ ಸರ್ಕಾರ ಖರೀದಿ ಮಾಡಿದ ವಸ್ತುಗಳ ಬೆಲೆ ಎಷ್ಟು? ಮಾರಾಟ ಮಾಡಿರುವುದು ಎಷ್ಟು? ಈ ವರ್ಷದ ಅಂತ್ಯದಲ್ಲಿ ಉಳಿದಿರುವುದು ಎಷ್ಟು? ಇದು ನನ್ನ ಪ್ರಶ್ನೆ.

ಶ್ರೀ ಎ.ಎಂ. ಹಿಂಡಸಗೇರಿ : ನಾನು ಉತ್ತರ ಹೇಳುತ್ತಿದ್ದೇನೆ. ಮಾನ್ಯಸದಸ್ಯರು ಕೇಳಬೇಕು. ಮೊದಲನೆಯ ಸಾಲಿನಲ್ಲಿ ನಾವು ಕೊಟ್ಟಿದ್ದ ಹಣ 75ಕೋಟಿ ರೂಪಾಯಿ ನಿಗದಿಪಡಿಸಿದ್ದೇವೆ. ಎರಡನೆಯ ಸಾಲಿನಲ್ಲಿ 66 ಕೋಟಿ ರೂಪಾಯಿ ಇಟ್ಟಿದ್ದೇವೆ. ಅದರ ಬಾಬ್ತು ನಮ್ಮ ಕಡೆ ಹಣ ಉಳಿದಿದೆಯೆಂದು ಹೇಳಿದ್ದೇನೆ. ಮುಂಬರುವ ವರ್ಷಗಳಲ್ಲಿ 48 ಕೋಟಿ ರೂಪಾಯಿ ಇಟ್ಟಿದ್ದೇವೆ. ಅದರಲ್ಲಿ 6ಕೋಟಿ ರೂಪಾಯಿ

ಬಿಡುಗಡೆ ಮಾಡಿದ್ದೇವೆ. ಅದಷ್ಟು ತೀವ್ರವಾಗಿ ಮುಂಬರುವ ವರ್ಷಗಳಲ್ಲಿ ಹಣ ಬಿಡುಗಡೆ ಮಾಡಿ ನಾವು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಆಯಿತು ಉತ್ತರ ಕೊಟ್ಟಿದ್ದಾರೆ. ಇನ್ನೇನು ಇದೆ?

ಶ್ರೀ ಬಿ. ಎಸ್ ಯಡಿಯೂರಪ್ಪ : ನಾನು ಉತ್ಪನ್ನ ಮಾಡಿದ್ದೀರಿ,ಎಷ್ಟು ಮಾರಾಟ ಮಾಡಿದ್ದೀರಿ, ಎಷ್ಟು ಸಾಮಗ್ರಿಗಳನ್ನು ಉಳಿಸಿದ್ದೀರಿ ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಅವರು ಉತ್ತರ ಹೇಳುತ್ತಿರುವುದು ಅಮೌಂಟ್ ಎಷ್ಟು ಉಳಿದಿದೆಯೆಂದು ಹೇಳುತ್ತಾರೆ. ನನ್ನ ಪ್ರಶ್ನೆ ಅದಲ್ಲ, ಈ ಯೋಜನೆಯಡಿಯಲ್ಲಿ ಸರ್ಕಾರ ವಸ್ತುಗಳನ್ನು 1992-93 ಮತ್ತು 1993-94ನೇ ಸಾಲಿನಲ್ಲಿ ಖರೀದಿ ಮಾಡಿದ ಮೊತ್ತವೆಷ್ಟು? ಮಾರಾಟ ಮಾಡಿದ ಮೊತ್ತವೆಷ್ಟು? ಉಳಿದಿರುವುದು ಎಷ್ಟು? ಸಾಮಗ್ರಿಗಳು ಉಳಿದಿರುವುದು ಎಷ್ಟು? ಸಾಮಾನು ಖರೀದಿ ಮಾಡಿದ್ದು ಎಷ್ಟಿದೆ? ನೀವು ಖರೀದಿ ಮಾಡಿದ ಕಚ್ಚಾಮಾಲು ಎಷ್ಟಿದೆ? ಸ್ಟಾಕ್ ಎಷ್ಟಿದೆ? ಕ್ವಾಂಟಿಟಿ, ಆಫ್ ಗುಡ್ಸ್, ಅಂದರೆ ಉಪ್ಪಿನಕಾಯಿ, ಹಪ್ಪಳ ಎಷ್ಟು ಉಳಿದಿದೆ ಎಂಬುದರ ಬಗ್ಗೆ ಹೇಳಿ.

ಶ್ರೀ ಎ.ಎಂ.ಹಿಂಡಸಗೇರಿ : ಉಪ್ಪಿನಕಾಯಿ ಹಪ್ಪಳ ಎಷ್ಟು ಉಳಿದಿದೆ ಎಂಬುದನ್ನುಹೇಳುವುದಕ್ಕಾಗುವುದಿಲ್ಲ. ಎಷ್ಟು ಖರೀದಿ ಮಾಡಿದ್ದೇವೆ, ಎಷ್ಟು ಮಾರಾಟ ಮಾಡಿದ್ದೇವೆ ಸ್ಟಾಕ್ ಎಷ್ಟಿದೆ ಎಂಬುದನೆಲ್ಲಾ ಅದೆಲ್ಲಾ ಹೇಳಿದ್ದೇನೆ.

ಅಧ್ಯಕ್ಷರು : ಮಂತ್ರಿಗಳು ತಮಗೆ ಟೈಮ್ ಬೇಕಾದಾರೆ ತೆಗೆದುಕೊಂಡು ಉತ್ತರ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಣದ ಬಗ್ಗೆ ಅವರು ವಿವರ ಕೊಟ್ಟಿದ್ದಾರೆ. ಕಚ್ಚಾಮಾಲು ಎಷ್ಟು ಉಳಿದಿದೆ ಎಂದು ನಾನು ಕೇಳಿದ್ದೇನೆ. ಅವರು ಹೇಳುತ್ತಿದ್ದಾರೆ, ಗ್ರಾಮೀಣ ಜನರಿಗೆ ಉದ್ಯೋಗ ಕೊಟ್ಟಿದ್ದೇವೆಂದು ಹೇಳುತ್ತಾರೆ. ಇದು ಪ್ರಮುಖವಾದ ಪ್ರಶ್ನೆ ನನಗೆ ಉತ್ತರ ಬೇಕಾಗಿದೆ.

ಶ್ರೀ ಸಿ. ಭೈರೇಗೌಡ : ಮಾನ್ಯಅಧ್ಯಕ್ಷರೇ ....

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ . ಮಂತ್ರಿಗಳು ಉತ್ತರ ಹೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಸಿ. ಭೈರೇಗೌಡ : ಅಧ್ಯಕ್ಷರಿಗೆ ಕೊಡಬೇಕಾಗಿರತಕ್ಕ ಹಣ ಇನ್ನು ಬಿಡುಗಡೆಯಾಗಿಲ್ಲ. ಅದನ್ನು ಯಾವಾಗ ಬಿಡುಗಡೆ ಮಾಡುತ್ತಾರೆಂದು ದಯವಿಟ್ಟು ಹೇಳಬೇಕು. ಅನೇಕ ಸಂಸ್ಥೆಗಳಿಗೆ ಹಣ ಬಿಡುಗಡೆಯಾಗಿಲ್ಲ.

ಅಧ್ಯಕ್ಷರು : ತಾವು ಎಲ್ಲಾ ವಿವರಗಳನ್ನು ಕೇಳಿದರೆ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಅವರು ಕೊಟ್ಟಿರುವ ಉತ್ತರ ಸ್ವಾಮಿ. ಗ್ರಾಮೀಣ ಜನರಿಗೆ ಟ್ರೈನಿಂಗ್ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ . ಎಷ್ಟು ಜನರಿಗೆ ಉದ್ಯೋಗ ಕೊಟ್ಟಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ : ಇದರಲ್ಲಿ ಕೆಲವು ಸಮಸ್ಯೆಗಳಿವೆ. ಇನ್ನೂ ಹಣವನ್ನು ಬಿಡುಗಡೆ ಮಾಡಿಲ್ಲ. ಅದನ್ನು ಯಾವಾಗ ಬಿಡುಗಡೆ ಮಾಡುತ್ತೀರಿ?

ಅಧ್ಯಕ್ಷರು : ಬೈರೇಗೌಡರೇ, ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ನೀವು ಹೇಳಿದ್ದೀರಿ, 74 ಸಾವಿರ ಜನರಿಗೆ ಟ್ರೈನಿಂಗ್ ಕೊಟ್ಟಿದ್ದೇವೆ ಎಂದು. ಇನ್ನೊಂದು ವರ್ಷ 61ಸಾವಿರ ಜನರಿಗೆ ಉದ್ಯೋಗ ಕೊಟ್ಟಿದ್ದೀರಿ? ಟ್ರೈನಿಂಗ್ ಉದ್ಯೋಗ ಅಲ್ಲ. ಎಷ್ಟು ಜನರಿಗೆ ಗ್ರಾಮಾಂತರ ಪ್ರದೇಶದ ಜನರಿಗೆ ಅದರಲ್ಲಿ ಉದ್ಯೋಗ ಕೊಟ್ಟಿದ್ದೀರಿ ಎಂಬುದನ್ನು ದಯಮಾಡಿ ಹೇಳಿ. ಈ ಯೋಜನೆಯ ಉದ್ದೇಶವೇ ಅದು.

ಶ್ರೀ ಎ.ಎಂ. ಹಿಂಡಸಗೇರಿ : - ಅಧ್ಯಕ್ಷರೇ, ನಾನು ಈಗಾಗಲೇ ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ಎಷ್ಟು ಪಲಾನುಭವಿಗಳಿಗೆ ಟ್ರೈನಿಂಗ್ ಕೊಟ್ಟಿದ್ದೇವೆ, ಎಷ್ಟು ರಖಂ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದೇನೆ. ಉದ್ಯೋಗ ಎಷ್ಟು ಜನರಿಗೆ ಕೊಟಿದ್ದೇವೆ ಎನ್ನುವ ಬಗ್ಗೆ ಮಾಹಿತಿ ಇಲ್ಲ. ಅದನ್ನು ನಾನು ಅವರಿಗೆ ಒದಗಿಸಿಕೊಡುತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : - ಈ ಉತ್ತರವನ್ನು ತೆಗೆದುಕೊಂಡು ನಾನು ಏನು ಮಾಡಲಿ? ವಿಶ್ವ ಯೋಜನೆಯ ಬಗ್ಗೆ ಬಹಳ ಪ್ರಚಾರ ತೆಗೆದುಕೊಂಡಿದ್ದೀರಿ?

ಅಧ್ಯಕ್ಷರು : ಯಡಿಯೂರಪ್ಪನವರೇ, ನೀವು ಕುಳಿತುಕೊಳ್ಳಬೇಕು. ಇದು ಸರಿಯಾದ ಕ್ರಮ ಅಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಎಷ್ಟು ಜನರಿಗೆ ಉದ್ಯೋಗ ಕೊಟ್ಟಿದ್ದೀರಿ ಎಂದರೆ ಅದಕ್ಕೆ ಉತ್ತರ ಇಲ್ಲ. ಪತ್ರಿಕೆಯ ಮುಖಪುಟದಲ್ಲಿ ಪ್ರಚಾರ ತೆಗೆದುಕೊಂಡರು.

(10)11-45
(11)11-50

ಅಧ್ಯಕ್ಷರು : ಯಡಿಯೂರಪ್ಪನವರೇ, ಇಲ್ಲಿ ಸ್ವಲ್ಪ ತಾವು ಕಲಿಯಬೇಕು. ತಾವು ಏನು ಕೇಳಿದ್ದೀರಿ, ಅದನ್ನು ನಾನು ಓದುತ್ತಿದ್ದೇನೆ. ತಾವು ವಿವರವಾದ ಮಾಹಿತಿ ಕೇಳಿದರೆ ಮಾನ್ಯ ಮಂತ್ರಿಗಳು ಅಥವಾ ಸರ್ಕಾರದವರು ವಿವರಗಳನ್ನು ಒದಗಿಸಿಕೊಡುವುದಕ್ಕೆ ಕಾಲಾವಕಾಶ ಕೇಳಿದ ನಂತರ ತಾವು ಕಾಯಬೇಕಾಗುತ್ತದೆ. ತಾವು ಕೇಳಿದ್ದನ್ನು ತಕ್ಷಣ ಬೇಕು ಎಂದರೆ ಅದು ಹೇಗೆ ಸಾಧ್ಯ?

ಶ್ರೀ ಬಿ.ಎಸ್. ಯಡಿಯೂರಪ್ಪ :- ಎಷ್ಟು ಜನರಿಗೆ ಉದ್ಯೋಗ ಕೊಟ್ಟಿದ್ದೀರಿ ಎಂದರೆ ಇಲ್ಲ. ಬೋಗಸ್ ಕಾರ್ಯಕ್ರಮ ಇದು .

ಅಧ್ಯಕ್ಷರು : ಸಾಕು. ನಾನು ಈಗ ಮುಂದಿವ ಪ್ರಶ್ನೆಗೆ ಹೋಗಿದ್ದೇನೆ....

ಶ್ರೀ ಬಿ. ಎಸ್. ಯಡಿಯೂರಪ್ಪ : ವಿಶ್ವ ಯೋಜನೆಯ ಪ್ರಚಾರ ತೆಗೆದುಕೊಂಡಿರಿ. ಜನರಿಗೆ ಟೋಪಿ ಹಾಕಿದಿರಿ. ಯಾರೊಬ್ಬರಿಗೂ ಉದ್ಯೋಗ ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು : ತಾವು ಮಾತನಾಡುವುದು ರೆಕಾರ್ಡ್ ಆಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮನಸ್ಸಿಗೆ ಬಂದಹಾಗೆ ಉತ್ತರ ಕೊಟ್ಟರೆ ಹೇಗೆ? ನಮಗೆ ಬೇಕಾದ ಉತ್ತರ ಸಿಗದಿದ್ದರೆ ನಾವು ಇಲ್ಲಿ ಕೆಲಸ ಮಾಡುವುದು? ಇದು ಬೋಗಸ್ ಕಾರ್ಯಕ್ರಮ

ವಿಷಯ : ಬೀರೂರು ಹೋಬಳ್ಳಿಯಲ್ಲಿ ಸಾಗುವಳಿ ಚೀಟಿ ನೀಡುವುದು

ಚುಕ್ಕೆ ಗುರುತಿನ ಪ್ರಶ್ನೆ : 128(192)

ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಡೂರು ತಾಲ್ಲೂಕು ಬೀರೂರು ಹೋಬಳಿ ಎಮ್ಮೆದೊಡ್ಡಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 77,73 ಮತ್ತು 72 ಮತ್ತು 74 ರಲ್ಲಿ ವಿವಿಧ ಜನಾಂಗಕ್ಕೆ ಸೇರಿದ ಸದಸ್ಯರುಗಳಿಗೆ 1977 ರಲ್ಲಿ ತಾತ್ಕಾಲಿಕ ಸಾಗುವಳಿ ಚೀಟಿ ನೀಡಲಾಗಿದೆಯೇ;

ಆ) ಈ ತಾತ್ಕಾಲಿಕ ಸಾಗುವಳಿ ಚೀಟಿಯನ್ನು 1981 ರಲ್ಲಿ ಖಾಯಂ ಗೊಳಿಸಲಾಗಿತ್ತೆ;

ಇ) ತಾತ್ಕಾಲಿಕವಾಗಿ ಸಾಗುವಳಿ ಚೀಟಿಯನ್ನು ಎಷ್ಟು ಜನಕ್ಕೆ ಕೊಡಲಾಗಿದೆ;

ಈ) ಖಾಯಂ ಸಾಗುವಳಿ ಚೀಟಿಯನ್ನು ಎಷ್ಟು ಜನಕ್ಕೆ ಕೊಡಲಾಗಿದೆ

ಉ) ಹೀಗೆ ಕೊಟ್ಟ ಸಾಗುವಳಿ ಚೀಟಿಗಳಿಗೆ ಟಿ.ಟಿ.ದಂಡ ಕಂದಾಯ ಇವುಗಳನ್ನು ಫಲಾನುಭವಿಗಳಿಂದ ವಸೂಲು ಮಾಡಲಾಗಿದೆಯೇ;

ಊ) 1994ರಲ್ಲಿ ದರಕಾಸ್ತು ಅರ್ಜಿಗಳನ್ನೇನಾದರೂ ವಜಾ ಮಾಡಲಾಗಿದೆಯೇ;

ಋ) ಹಾಗೆ ಮಾಡಿದ್ದಲ್ಲಿ, ಕಾರಣಗಳೇನು?

ಶ್ರೀ. ಧರ್ಮಸಿಂಗ್ (ಕಂದಾಯ ಸಚಿವರು)